S C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 208/2019

ಚಾ.ಸಾ.–04 ಪ್ರಾ.ಸಾ.–03

| | |
|---|---|
| ಸಾಕ್ಷಿದಾರರ ಹೆಸರು | ಎಂ.ಸಣ್ಣ ಮಹದೇವು |
| ತಂದೆಯ ಹೆಸರು | ಸಿ.ಮಹದೇವಯ್ಯ |
| ವಯಸ್ಸು | 65 ವರ್ಷಗಳು |
| ಉದ್ಯೋಗ | ಪೇಯಿಂಟಿಂಗ್ ಕಲಾಕಾರ |
| ವಾಸ | ಮೊಗರಹಳ್ಳಿ ಮಂಟಿ ಗ್ರಾಮ. |

**ದಿನಾಂಕಃ 19.12.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇಲ್ಲ. ಅವರನ್ನು ಈ ಹಿಂದೆ ನಾನು ನೋಡಿರುವುದಿಲ್ಲ.

2) ಚಾಸಾ–3 ರವರ ಪರಿಚಯ ನನಗೆ ಇದೆ. ಮೊಗರಹಳ್ಳಿ ಮಂಟಿಯ ಬಳಿ ಇರುವ ಸೈಟುಗಳಲ್ಲಿ ನೆಟ್ಟಿದ್ದ ಕಲ್ಲುಗಳಿಗೆ ನಂಬರ್ ಪೇಯಿಂಟ್ ಮಾಡುವ ಕೆಲಸವನ್ನು ಚಾಸಾ-3 ರವರು ನನಗೆ ನೀಡಿದ್ದರು. ಅದರಂತೆ ಸದರಿ ಸ್ಥಳದಲ್ಲಿ ನಾನು ಕಲ್ಲುಗಳಿಗೆ ನಂಬರ್ ಗಳನ್ನು ಪೇಯಿಂಟ್ ಮಾಡಿರುತ್ತೇನೆ, ಎಷ್ಟು ವರ್ಷಗಳ ಹಿಂದೆ ಎಂದು ನನಗೆ ನೆನಪಿಲ್ಲ. ಕಲ್ಲುಗಳಿಗೆ ನಂಬರ್ ಪೇಯಿಂಟ್ ಬರೆಯುವುದನ್ನು ಬಿಟ್ಟು ಬೇರೆ ಯಾವುದೇ ಕೆಲಸವನ್ನು ಚಾಸಾ- 3 ರವರು ನನಗೆ ಹೇಳಿರುವುದಿಲ್ಲ. ಒಂದು ಬೋರ್ಡಿನಲ್ಲಿ ಹೆಸರುಗಳನ್ನು ಸಹಾ ಬರೆಸಿದ್ದರು. ನಂತರ ಸದರಿ ಬೋರ್ಡಿಗೂ ಮತ್ತು ಕಲ್ಲುಗಳಿಗೂ ಏನಾಯಿತು ಎಂದು ನನಗೆ ಗೊತ್ತಿಲ್ಲ. ಬೋರ್ಡುಗಳು ಮತ್ತು ಕಲ್ಲುಗಳು ಕಿತ್ತು ಹೋಗಿವೆ ಎಂದು ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಅದನ್ನು

ಯಾರಾದರೂ ಕಿತ್ತು ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಖುದ್ದಾಗಿ ನೋಡಿರುವುದಿಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

3) ದಿಃ07.03.2019 ರಂದು ನಾನು ಶ್ರೀರಂಗಪಟ್ಟಣ ಡಿ.ವೈ.ಎಸ್.ಪಿ ರವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ13.01.2019 ರಂದು ಬೆಳಿಗ್ಗೆ 11.0 ಗಂಟೆಗೆ ನಾನು ಮತ್ತು ಚಾಸಾ- 3 ರವರು ಕೆ.ಆರ್.ಎಸ್ ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದಾಗ ನಾನು ಪೇಯಿಂಟ್ ಮಾಡಿದ್ದ ಕಲ್ಲು ಮತ್ತು ಬೋರ್ಡ್‌ನ್ನು ಯಾರೋ ಕಿತ್ತು ಹಾಕುತ್ತಿದ್ದು ಹತ್ತಿರಕ್ಕೆ ಹೋಗಿ ನೋಡಿದಾಗ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಅವುಗಳನ್ನು ಕಿತ್ತು ಹಾಕುತ್ತಿದ್ದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಪೋಲೀಸ್ ನಾಗರಾಜುರವರು ಪೋನ್ ಮಾಡಿ ಕಲ್ಲು ಹಾಕುತ್ತಿರುವ ಬಗ್ಗೆ ವಿಚಾರ ಮಾಡಿದ್ದು ಅವರಿಗೆ ಆರೋಪಿತರು ಕಲ್ಲು ಕಿತ್ತು ಹಾಕುತ್ತಿರುವ ವಿಚಾರವನ್ನು ನಾನು ತಿಳಿಸಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. "ಹೀಗಿರುವಾಗ ............... .............. ... ............... ............... ............... ............... ಮತ್ತೆ ನೋಡಿದರೆ ಗುರುತಿಸುತ್ತೇನೆ" ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.**11 ಎಂದು ಗುರುತಿಸಲಾಯಿತು.

4) ನಾನು ಈ ಪ್ರಕರಣದ ಘಟನೆಯನ್ನು ಖುದ್ದು ನೋಡಿದ್ದರೂ ಸಹಾ ಈ ವಿಷಯವನ್ನು ಪೋಲೀಸ್ ನಾಗರಾಜುರವರಿಗೆ ತಿಳಿಸಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಂ.ಎಸ್.ಪಿ ವಕೀಲರಿಂದಃ**

5) ನಾನು ಕಲ್ಲುಗಳಿಗೆ ನಂಬರ್ ಬರೆದಿದ್ದ ಸ್ಥಳದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಚಾಸಾ- 3 ರವರು ನಂಬರ್ ಬರೆಯಲು ನನಗೆ ಹೇಳಿದ್ದು ಹೊರತು ಬೇರೆ ಯಾರು ನನಗೆ ಏನು ಹೇಳಿರುವುದಿಲ್ಲ. ನಾನು ಪೇಯಿಂಟ್ ಮಾಡಿದ್ದ ಒಂದು ಬೋರ್ಡು ಜಮೀನಿನಲ್ಲಿ ನೆಟ್ಟಿತ್ತು. ಯಾವ ಜಾಗ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ.

**ಮರು ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

6) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ